V.S. English Medium High School
No.............
Date 11-05-2013
Mudigere

ಕರ್ನಾಟಕ ಸರ್ಕಾರ

**ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ, ಮೂಡಿಗೆರೆ ತಾಲ್ಲೂಕು, ಮೂಡಿಗೆರೆ**

ಸಂಖ್ಯೆ: ಪಿ2: ಸಾಶಿಇ/ಮೂ.ಪ್ರಾ.ಶಾ.ಮಾ.ನ /2012-13 ದಿನಾಂಕ 17/04/2013

-: ಆದೇಶ :-

ವಿಷಯ:- ವಿ.ಎಸ್. ಪೂರ್ವ ಪ್ರಾಥಮಿಕ ಶಾಲೆ, ಮೂಡಿಗೆರೆ ಶಾಲೆಯ ಮಾನ್ಯತೆ ನವೀಕರಿಸುವ ಬಗ್ಗೆ.

ಉಲ್ಲೇಖ:- ಆಡಳಿತಾಧಿಕಾರಿ, ವಿ.ಎಸ್. ಎಜುಕೇಷನಲ್ ಟ್ರಸ್ಟ್ (ರಿ) ಮೂಡಿಗೆರೆ ಪ.ಸಂ 07/2012-13 ದಿನಾಂಕ 30/05/2012

*******

**ಪ್ರಸ್ತಾವನೆ:-**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿ.ಎಸ್. ಎಜುಕೇಷನಲ್ ಟ್ರಸ್ಟ್ (ರಿ) ಮೂಡಿಗೆರೆ ಇವರಿಂದ 2007-08 ನೇ ಸಾಲಿನಿಂದ ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾರಂಭಿಸಲು ಅನುಮತಿ ಪಡೆಯಲಾಗಿದ್ದು, 2011-12 ನೇ ಸಾಲಿನ ವರೆಗೆ ಮಾನ್ಯತೆಯನ್ನು ನವೀಕರಿಸಲಾಗಿದೆ. 2012-13 ನೇ ಸಾಲಿನಿಂದ ಮಾನ್ಯತೆ ನವೀಕರಣ ಕೋರಿ ಉಲ್ಲೇಖಿತ ಪತ್ರದಲ್ಲಿ ಪ್ರಸ್ತಾವನೆ ಸಲ್ಲಿಸಿದ್ದಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**ಆದೇಶ:-**

ಉಲ್ಲೇಖದಲ್ಲಿ ಸಲ್ಲಿಸಲಾದ ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಕೆಳಕಂಡ ಷರತ್ತುಗಳಿಗೊಳಪಟ್ಟು ವಿ.ಎಸ್. ಎಜುಕೇಷನಲ್ ಟ್ರಸ್ಟ್ (ರಿ) ಮೂಡಿಗೆರೆ ಇವರು ನಡೆಸುತ್ತಿರುವ ಪೂರ್ವ ಪ್ರಾಥಮಿಕ ತರಗತಿಗಳನ್ನು ನಡೆಸಲು 2012-13 ರಿಂದ 2016-17 ರ ವರೆಗೆ ಮಾನ್ಯತೆ ನವೀಕರಿಸಿದೆ.

01. ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ ನಿಯಮ 1999ರ ನಿಯಮ ಹಾಗೂ ಶಿಕ್ಷಣ ಕಾಯಿದೆ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು.
02. ಶಾಲೆಯನ್ನು ಪ್ರಾರಂಭಿಸಲು ಅನುಮತಿ ನೀಡುವಾಗ ವಿಧಿಸಿರುವ ಷರತ್ತುಗಳನ್ನು ಪಾಲಿಸುವುದು.
03. ಶಾಲೆಯನ್ನು 5 ವರ್ಷಗಳಿಗೊಮ್ಮೆ ತಪ್ಪದೆ ನವೀಕರಿಸಿಕೊಳ್ಳತಕ್ಕದ್ದು.
04. ಶಿಕ್ಷಣ ಕಾಯಿದೆ ನಿಯಮದಂತೆ ಪ್ರತಿ ತರಗತಿಯಲ್ಲಿ ಕನಿಷ್ಠ ವಿದ್ಯಾರ್ಥಿಗಳ ಹಾಜರಾತಿ ಇರತಕ್ಕದ್ದು.
05. ಶಾಲೆಗೆ ಅಗತ್ಯವಿರುವ ಕುಡಿಯುವ ನೀರಿನ ಸೌಲಭ್ಯ ಮತ್ತು ಶೌಚಾಲಯ ವ್ಯವಸ್ಥೆಯನ್ನು ಹೊಂದಿರತಕ್ಕದ್ದು.
06. ಶಾಲೆಗೆ ಅಗತ್ಯವಾದ ಪಾಠೋಪಕರಣ, ಪೀಠೋಪಕರಣಗಳನ್ನು ಹೊಂದಿರತಕ್ಕದ್ದು.
07. ಸರ್ಕಾರದಿಂದ ಅಂಗೀಕೃತವಾದ ಶುಲ್ಕವನ್ನು ಮಾತ್ರ ವಿದ್ಯಾರ್ಥಿಗಳಿಂದ ವಸೂಲಿ ಮಾಡತಕ್ಕದ್ದು.
08. ಪ್ರತಿ ವರ್ಷವೂ ಶಾಲೆಯ ಹಣಕಾಸಿನ ಲೆಕ್ಕಪತ್ರಗಳನ್ನು ಇಲಾಖೆಯಿಂದ ಅನುಮೋದಿಸಲ್ಪಟ್ಟಿರುವ ಲೆಕ್ಕ ಪರಿಶೋಧಕರಿಂದ ಆಡಿಟ್ ಮಾಡಿಸುವುದು.
09. ಇಲಾಖೆ ಆಗಿಂದಾಗ್ಗೆ ಹೊರಡಿಸುವ ನಿಯಮ ಆದೇಶಗಳನ್ನು ಪಾಲಿಸುವುದು.
10. ಶಿಕ್ಷಕರ ಸೇವಾ ಭದ್ರತೆ ನಿಯಮದಂತೆ ಕ್ರಮ ವಹಿಸುವುದು.
11. ಸಿಬ್ಬಂದಿಗಳ ಸೇವಾ ಪುಸ್ತಕಗಳನ್ನು ಕಡ್ಡಾಯವಾಗಿ ತೆರೆಯುವುದು ಹಾಗೂ ನಿರ್ವಹಿಸುವುದು.
12. ಸುರಕ್ಷತೆ ನಿಯಮಗಳನ್ನು ಪಾಲಿಸುವುದು. (ಕಟ್ಟಡ ಸುರಕ್ಷತೆ, ಬೆಂಕಿ, ವಿದ್ಯುತ್ ಅವಘಡ ಇತ್ಯಾದಿ)
13. ತರಬೇತಿ ಹೊಂದಿದ ಹಾಗೂ ಇಲಾಖೆಯ ನಿಯಮಗಳ ಪ್ರಕಾರ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಿಸಿಕೊಳ್ಳುವುದು.

ಕ್ಷೇತ್ರ ಶಿಕ್ಷಣಾಧಿಕಾರಿ,
ಸಾಶಿಇ, ಮೂಡಿಗೆರೆ

ಗೆ,
ಆಡಳಿತಾಧಿಕಾರಿ,
ವಿ.ಎಸ್. ಎಜುಕೇಷನಲ್ ಟ್ರಸ್ಟ್ (ರಿ)
ಮೂಡಿಗೆರೆ